# ಗೋ ವಿಶ್ವ

Cow Universe

गौ विश्व

ಸರ್ವಧಾರಿ ಸಂವತ್ಸರ | ಆಶ್ವಯುಜ | ಅಕ್ಟೋಬರ್ ೨೦೦೮ | ಸಂಪುಟ-೨ | ಸಂಚಿಕೆ-೧೦


**ಗುರುವಾಣಿ**

## ದೇವರು-ದೇವಸ್ಥಾನಗಳ ಮಾರ್ಗವಾಗಿ ವಿಶ್ವಮಂಗಲದೆಡೆಗೆ ಗೋವಿನ ಯಾತ್ರೆ

## 'ವಿಶ್ವಮಂಗಲ ಗೋ ಗ್ರಾಮ ಯಾತ್ರೆ'



ನಮ್ಮ ಸಂಸ್ಕೃತಿ ಗೋವು-ಗೋಶಾಲೆ ಮತ್ತು ದೇವರು-ದೇವಸ್ಥಾನಗಳ ಸಂಬಂಧದ ಬಂಧವನ್ನು ಗಟ್ಟಿಯಾಗಿ ಪ್ರತಿಪಾದಿಸಿದೆ.

- ದೇವಾಲಯದ ಶುದ್ಧಿಗೆ ಗೋಮೂತ್ರ, ಗೋಮಯಗಳನ್ನು ಒಳಗೊಂಡ ಪಂಚಗವ್ಯವನ್ನು ಬಳಸಲು ಪರಂಪರಾಗತ ನಿರ್ದೇಶನ ಇದೆ.
- ದೇವರಿಗೆ ಪಂಚಾಮೃತ ಅಭಿಷೇಕ ಹಾಲು, ಮೊಸರು, ತುಪ್ಪ ಇಲ್ಲದೇ ನಡೆಯದು.
- ನಂದಾದೀಪವನ್ನು ಬೆಳಗಲು, ಹೋಮ-ಹವನಾದಿಗಳನ್ನು ಸಾಂಗವಾಗಿ ನೆರವೇರಿಸಲು ತುಪ್ಪದ ಪಾತ್ರ ಅನಿವಾರ್ಯ.
- ಪ್ರಸಾದ ರೂಪದ ಭಕ್ಷ್ಯ-ಭೋಜ್ಯಾದಿಗಳ ತಯಾರಿಗೆ ಹಾಲು, ತುಪ್ಪ ಬೇಕೇಬೇಕು.
- ಇಷ್ಟಲ್ಲದೇ, ಹಲವೆಡೆಗಳಲ್ಲಿ ಅಲಂಕಾರಕ್ಕೂ ಬೆಣ್ಣೆ ಬೇಕು.

ದೇವರು-ದೇವಾಲಯಗಳು ಭಕ್ತಿ-ಭಾವಗಳಿಗೆ ಸಂಬಂಧಿಸಿದ ವಿಷಯಗಳು. ಅಲ್ಲಿ ಎಲ್ಲೇ ವ್ಯತ್ಯಯ ಆದರೂ ಮನಸ್ಸಿಗೆ ಒಪ್ಪಿಗೆ-ಸಮಾಧಾನಗಳನ್ನು ತರುವುದಿಲ್ಲ. ಹಾಗಿದ್ದರೂ, ಇಂದು ದೇವಾಲಯದ ವಿನಿಯೋಗಕ್ಕೆ ಬೇಕಾದ ಹಾಲು, ಮೊಸರು, ಬೆಣ್ಣೆ, ತುಪ್ಪ, ಗೋಮೂತ್ರ, ಗೋಮಯಗಳನ್ನು ಹೋಟೆಲ್‌ಗಳಲ್ಲಿ ಪದಾರ್ಥಗಳನ್ನು ತಯಾರಿಸಲು ಕೊಂಡು ತರುವಂತೆ ತಂದು ಬಳಸುತ್ತಿದ್ದೇವೆ. ಎಲ್ಲಿ ಭಾವನೆಯೇ ಎಲ್ಲವೂ ಆಗಿದೆಯೋ ಅಲ್ಲಿಯೇ ಹೀಗಾಗುತ್ತಿರುವುದು ಬಹಳ ಬೇಸರವನ್ನು ಉಂಟುಮಾಡುತ್ತಿದೆ.

ಇದು ಹೀಗೆಯೇ ಮುಂದುವರೆಯದಂತೆ ತಡೆಯಲು ಶ್ರೀರಾಮಚಂದ್ರಾಪುರಮಠ ಸದೃಢ ಉಪಕ್ರಮವನ್ನು ಇಡುತ್ತಿದೆ. ಅದರಂತೆ, ಶ್ರೀಮಠ ಒಂದು ಸಂಪೂರ್ಣ ಗೋ ಸಂಕುಲವನ್ನು ಪ್ರತಿಯೊಂದು ದೇವಾಲಯಕ್ಕೆ ಕೊಡಮಾಡುವ ಇಚ್ಛೆಯನ್ನು ಹೊಂದಿದೆ. ಕೊಡಮಾಡುವ ಗೋ ಸಂಕುಲದಲ್ಲಿ ದೇಶೀ ಹಸು, ಕರು, ಹೋರಿ, ಎಲ್ಲ ಒಟ್ಟು ಸೇರಿ ಹತ್ತರ ಆಸುಪಾಸಿನಲ್ಲಿ ಗೋವುಗಳು ಇರಲಿವೆ.

ಬಂದ ಭಕ್ತಾದಿಗಳಿಗೆ ಊಟ, ಉಪಚಾರ, ವಸತಿ ಮೊದಲಾದ ವ್ಯವಸ್ಥೆಗಳನ್ನು ಮಾಡಿಕೊಟ್ಟು ಧನ್ಯತೆಯನ್ನು ಭಾವಿಸುವ ದೇವಾಲಯಗಳ ಆಡಳಿತ ಮಂಡಳಿಗಳು ಈ ಬಗ್ಗೆಯೂ ಗಮನ ಹರಿಸುವುದು ಅತ್ಯಗತ್ಯ. ಏಕೆಂದರೆ, ದೇವಾಲಯ ಸ್ಥಾಪನೆಯ ಮೂಲ ಆಶಯ ಭಕ್ತಿ-ಭಾವದ ಹಾರ್ದಿಕ ಧರ್ಮವನ್ನು ಜನರಲ್ಲಿ ಬಿತ್ತುವುದಾಗಿದೆ. ದೇವಾಲಯದ ದ್ವಾರದಲ್ಲಿ ಗೋಶಾಲೆಯ ಸ್ಥಾಪನೆ ಈ ಧರ್ಮವನ್ನು ಅತಿಶಯವಾಗಿ ತುಂಬಿಕೊಡುತ್ತದೆ.

ಚಿಗುರೊಡೆದ ಸದ್ಭಾವನೆಗೆ ಸಮರ್ಪಕ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತಿದ್ದೇವೆ.

### ಹೂರಣ


ಗುರುವಾಣಿ
ಪ್ರಶ್ನೋತ್ತರ
ಮಾಸದ ಗೋವು: ಮಾಳ್ವಿ
ಗೋಮೇಧವೆಂಬ ಚಿನ್ನದ ಗಣ
ಗೋವು ಮತ್ತು ಕೃಷಿ
ಸಹಸ್ಪಂದನ



ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW
ಅಂತರಜಾಲ ತಾಣ: vishwagou.org
ಸಂಪರ್ಕ: govishva@gmail.com




ಮುಂದಿನ ಕ್ರಮಕ್ಕಾಗಿ ಶ್ರೀರಾಮಚಂದ್ರಾಪುರಮಠವನ್ನು ಯಾವತ್ತಿಗೂ ಸಂಪರ್ಕಿಸಬಹುದು. ರೈತನ ಮನೆಯಲ್ಲಿ ಗೋವನ್ನೂ, ದೇವಾಲಯದಲ್ಲಿ ಗೋಶಾಲೆಯನ್ನೂ ಸ್ಥಾಪಿಸುವ ಸಂಕಲ್ಪಕ್ಕೆ ಶ್ರೀಮಠ ಟೊಂಕಕಟ್ಟಿ ನಿಂತಿದೆ.

ಅದರ ಸಲುವಾಗಿ ಪ್ರಸ್ತುತ, ಶ್ರೀಮಠ ವಿಶ್ವಮಂಗಲ ಗೋ ಗ್ರಾಮ ಯಾತ್ರೆಗೆ ಸಜ್ಜಾಗುತ್ತಿದೆ. ಸಿದ್ಧತಾ ಪ್ರವಾಸಗಳು ಈಗಾಗಲೇ ಪ್ರಾರಂಭವಾಗಿವೆ. ಆಂಧ್ರ, ತಮಿಳುನಾಡಿನ ಪ್ರವಾಸಗಳು ಸಂಪನ್ನಗೊಂಡಿದ್ದು, ಉಳಿದ ರಾಜ್ಯಗಳಲ್ಲಿ ಪ್ರವಾಸವಾಗಬೇಕಿದೆ. ಯಾತ್ರೆ ಬರುವ ವಿಜಯ ದಶಮಿಯಂದು ವೃಂದಾವನದಿಂದ ಹೊರಡಲಿದೆ. ಇಡೀ ಭಾರತವನ್ನು ತನ್ನ ಏಕಮೇವ ಅದ್ವಿತೀಯ ಸೂತ್ರದೊಂದಿಗೆ ಹೆಣೆಯಲಿದೆ.

ತನ್ಮೂಲಕ ಈ ಅಖಂಡ ಬ್ರಹ್ಮಾಂಡಕ್ಕೇ ಮಂಗಲಮಯ ಪಾವನ ಸಂದೇಶವನ್ನು ಸಾರುವ ಸದವಕಾಶ ಎಲ್ಲೆಲ್ಲಿಯೂ ತೆರೆದುಕೊಳ್ಳಲಿದೆ.

ಗೋ ವಿಶ್ವದ ಪ್ರಥಮ ವಾರ್ಷಿಕೋತ್ಸವದ ಈ ಶುಭ ಸಂದರ್ಭದಲ್ಲಿ ಪತ್ರಿಕೆಗಾಗಿ ದುಡಿದ ಎಲ್ಲರಿಗೂ ಮತ್ತು ಕಾಳಜಿ ವಹಿಸಿ ಓದಿದ, ಓದಿಸಿದ ಎಲ್ಲರಿಗೂ ಶ್ರೀಮನ್ನಾರಾಯಣ ಸ್ಮರಣಪೂರ್ವಕ ಶುಭಾಶೀರ್ವಾದಗಳು. ಪತ್ರಿಕೆ ಮೌಲಿಕವಾದ ಲೇಖನಗಳನ್ನು ಪ್ರಕಟಿಸುತ್ತಿರುವುದು ಹರ್ಷವನ್ನುಂಟುಮಾಡಿದೆ. ಬರುವ ದಿನಗಳಲ್ಲಿಯೂ ಇತೋಪ್ಯತಿಶಯವಾಗಿ ಗೋ ವಿಶ್ವ ವರ್ಧಿಸಲಿ, ಪ್ರಕಾಶಿಸಲಿ, ಅದರ ನಾದ ದುಂದುಭಿ ಸರ್ವ ವ್ಯಾಪಿಯಾಗಲಿ ಎಂದು ಹಾರೈಸುತ್ತೇವೆ. ಎಲ್ಲರಿಗೂ ಒಳ್ಳೆಯದಾಗಲಿ. ವಂದೇ ಗೋ ಮಾತರಮ್.

**– ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

**ಶ್ರೀ ರಾಮಚಂದ್ರಾಪುರ ಮಠ**

## ಪ್ರಶ್ನೋತ್ತರ

ಪ್ರ: ಯಾವೆಲ್ಲಾ ನಾಯಕರು ಗೋಸಂರಕ್ಷಣೆ ಬಗ್ಗೆ ಏನು ಹೇಳಿದರು ?

ಉ: ಭೂದಾನ ಚಳವಳಿಯ ನಾಯಕ ಆಚಾರ್ಯ ವಿನೋಬಾ ಭಾವೆ ಹೇಳಿದರು. "ಗೋಸಂರಕ್ಷಣೆ ಆಗದಿದ್ದಲ್ಲಿ ನಮ್ಮ ಸ್ವಾತಂತ್ರ್ಯವನ್ನೇ ಕಳೆದುಕೊಂಡಂತೆ. ಗೋಹತ್ಯೆ ನಿಲ್ಲಿಸುವುದು ಭಾರತೀಯರ ಲೋಕಾಜ್ಞೆ (ಮ್ಯಾಂಡೇಟ್) ಆಗಿದೆ. ಮತ್ತು ಪ್ರಧಾನಿಗಳು (ಪಂ. ನೆಹರು) ಇದನ್ನು ಒಪ್ಪಲೇಬೇಕು."

ಲೋಕನಾಯಕ ಜಯಪ್ರಕಾಶ್ ನಾರಾಯಣ್ ಹೇಳಿದ್ದು : "ಭಾರತದ ಸ್ಥಿತಿ ಗತಿಯಲ್ಲಿ ಗೋಹತ್ಯೆಯ ಮೇಲೆ ಪ್ರತಿಬಂಧ ಹಾಕುವುದಕ್ಕಿಂತ ಹೆಚ್ಚು ವೈಜ್ಞಾನಿಕ ಹಾಗೂ ವಿವೇಕಪೂರ್ಣವಾದ ವಿಚಾರ ಇನ್ನಾವುದೂ ಇರಲಾರದು".

ಪ್ರ: ಗೋಸಂರಕ್ಷಣೆಯ ಪರವಾಗಿ ರಾಷ್ಟ್ರನಾಯಕರು ನೀಡಿದ ವಚನಗಳು ಏನಾದುವು?

ಉ: ಭಾರತದ ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಗೋಸಂರಕ್ಷಣೆ ಬಗ್ಗೆ ರಾಷ್ಟ್ರನಾಯಕರು ನೀಡಿದ ವಚನಗಳನ್ನು 'ವಿಫಲ ವಚನಗಳು' ಎನ್ನದೇ ವಿಧಿಯಿಲ್ಲ. ಕಾಂಗ್ರೆಸ್ ಪಕ್ಷವು ಕೇಂದ್ರದಲ್ಲಿ ಸುಮಾರು ೫೦ ವರ್ಷಗಳಷ್ಟು ದೀರ್ಘಕಾಲ ಆಡಳಿತದ ಸೂತ್ರ ಹಿಡಿದಿದ್ದರೂ ಗೋವಧೆ ನಿಷೇಧ ಕಾಯಿದೆ ರಚಿಸುವುದನ್ನು ಉದ್ದೇಶಪೂರ್ವಕವಾಗಿ ತಡೆಹಿಡಿದಿದೆ. ಗೋಸಂರಕ್ಷಣೆಯಿಂದ ಹಿಂದುಗಳಿಗೆ ಮಾತ್ರ ಲಾಭ, ಮುಸಲ್ಮಾನರಿಗೆ ಲಾಭವಿಲ್ಲ ಎಂದು ಸರಕಾರಗಳು ತಿಳಿದಿರುವಂತಿದೆ. ಆದರೆ ೨೦೦೨ ರ ರಾಷ್ಟ್ರೀಯ ಜಾನುವಾರು ಆಯೋಗದ ವರದಿ ಹಾಗೂ ೨೦೦೫ ರ ಸುಪ್ರೀಂ ಕೋರ್ಟಿನ ತೀರ್ಪು, ಗೋಸಂರಕ್ಷಣೆಯ ಭಾರತದ ಆರ್ಥಿಕ ಅಗತ್ಯ ಎಂಬುದನ್ನು ಸ್ಪಷ್ಟವಾಗಿ ತಿಳಿಸಿವೆ.

**– ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)



ಗೋ ವಿಶ್ವ ಪತ್ರಿಕೆಯ ಎಲ್ಲ ಓದುಗರಿಗೆ ದೀಪಾವಳಿ ಹಬ್ಬದ ಶುಭಾಶಯಗಳು. ದೀಪಾವಳಿಯ ಸಂದರ್ಭದಲ್ಲಿ ಗೋವುಗಳಿಗೆ ಮತ್ತು ತುಳಸಿಗೆ ಪೂಜೆ ಮಾಡುವುದು ನಮ್ಮ ಸಂಪ್ರದಾಯ. ಆದುದರಿಂದ ನಮಗೆ ದೀಪಾವಳಿ ವಿಶೇಷ ಹಬ್ಬ. ಈ ದೀಪಾವಳಿಯನ್ನು ಎಲ್ಲರು ವಾಯು ಮಾಲಿನ್ಯ ಮತ್ತು ಶಬ್ದ ಮಾಲಿನ್ಯವಿಲ್ಲದೆ ಆಚರಿಸಿ ಸಂಭ್ರಮಿಸಿರೆಂದು ಆಶಿಸುತ್ತೇವೆ *–ಸಂಪಾದಕ ಮಂಡಳಿ*

## ಮಾಸದ ಗೋವು

# ಮಾಳ್ವಿ

ಮಾಳ್ವಿಯ ಮೂಲ ಮಧ್ಯಭಾರತದ ಮಾಳ್ವಾ ಪ್ರಾಂತ್ಯ. ಪಕ್ಕಾ ಕೆಲಸಗಾರ ತಳಿ ಮಾಳ್ವಿ. ದೊಡ್ಡ ಭೌಗೋಳಿಕ ಪ್ರದೇಶದಲ್ಲಿ ಹರಡಿಕೊಂಡಿರುವ ಮಾಳ್ವಿ, ರಾಜಸ್ಥಾನದ ಆಸುಪಾಸಿನಲ್ಲಿ ದೊಡ್ಡಗಾತ್ರದ ಬಲಿಷ್ಟ ತಳಿಯಾದರೆ, ಮಧ್ಯಪ್ರದೇಶದಲ್ಲಿ ಕುಳ್ಳ ಆದರೆ ರಜಪುತಾನದ ಮಾಳ್ವಿಯ ಹಾಗೇ ಶಕ್ತಿಯುತ. ಮುಂಬೈ-ಹೈದರಾಬಾದ್ ರಾಜ್ಯದ ಕೆಲಪ್ರಾಂತ್ಯಗಳಲಿ ಅತ್ಯಂತ ಜನಪ್ರಿಯವಾಗಿರುವ ಮಾಳ್ವಿ ಇಲ್ಲಿ ಮಧ್ಯಮ ಗಾತ್ರದ ಉಳುಮೆಗೆ ಹಾಗೂ ಗಾಡಿ ಎತ್ತುಗಳಾಗಿ ಉಪಯೋಗಿಸಲ್ಪಡುತ್ತವೆ.





ಮಾಳವಿ, ಮಧ್ಯಪ್ರದೇಶ, ರಾಜಸ್ಥಾನ

ಇವುಗಳ ಆಕಾರದಲ್ಲಿ ಸ್ವಲ್ಪ ಸ್ವಲ್ಪ ವ್ಯತ್ಯಾಸ ಪ್ರದೇಶಗಳಿಗನುಗುಣವಾಗಿ ಇದೆಯಾದರೂ ಸಾಮನ್ಯವಾಗಿ ಇವು ಕುಳ್ಳನೆಯ ಆದರೆ ಬಲಿಷ್ಟವಾದ ದೇಹದವುಗಳು. ನೇರ ಬೆನ್ನು, ಗಿಡ್ಡ ಕಾಲುಗಳು, ಜೋಲಾಡದ ಸಣ್ಣ ಕಿವಿಗಳು, ದಪ್ಪನೆಯ ಮುಂದೆ ಬಾಗಿದ ಕೋಡು, ಮೊಣಕಾಲು ಮುಟ್ಟುವ ಬಾಲ ಇವು ಮಾಳ್ವಿಯ ಬಗ್ಗೆ ಹೇಳಬಹುದಾದ ದೈಹಿಕ ವೈಶಿಷ್ಟ್ಯಗಳು. ಬಣ್ಣ ಸಾಧಾರಣವಾಗಿ ಬೂದು. ಕುತ್ತಿಗೆ, ಭುಜ, ಡುಬ್ಬಗಳ ಮೇಲಿನ ಕಪ್ಪು ಬಣ್ಣ ಇವುಗಳಿಗೆ ಸೃಷ್ಟಿಯಿತ್ತ ದೃಷ್ಟಿಬೊಟ್ಟುಗಳು.

ಮಾಳ್ವಿಗಳು ಚುರುಕಿನ ನಡಿಗೆಗೆ ಪ್ರಸಿದ್ಧ. ಬೆನ್ನಮೇಲಿಟ್ಟ ಹೊರೆಗೂ ತಮಗೂ ಸಂಬಂಧವೇ ಇಲ್ಲವೇನೋ ಎಂಬಂತೆ ಆಯಾಸವಿಲ್ಲದೆ ಹರದಾರಿ ನಡೆದುಬಿಡುತ್ತವೆ. ಅಲ್ಲದೇ, ಎತ್ತುಗಳು ಕಪ್ಪುಮಣ್ಣಿನಲ್ಲಿ ಸುಲಭವಾಗಿ ಹೂಳುವುದರಿಂದ, ಸಣ್ಣ ಮತ್ತು ಮಧ್ಯಮ ರೈತರಿಗೆ ವರದಾನ. ಇವುಗಳ ಹಾಲು ನೀಡುವ ಸಾಮರ್ಥ್ಯ ಕಡಿಮೆಯದರೂ ಕೆಲವು ಆಯ್ದ ಹಸುಗಳು ೨೫೦೦ ಪೌಂಡ್‌ಗಳಷ್ಟು ಹಾಲು ಒಂದು ಕರಾವಿಗೆ ನೀಡಿದ ಉದಾಹರಣೆಗಳಿವೆ.

– **ಮಧುಕೇಶ ದೊಡ್ಡೇರಿ**



# ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ ೨೭, ೨೦೦೭ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ–ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು ಹದಿಮೂರನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ–ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com

# ಗೋಮೇಧವೆಂಬ ಚಿನ್ನದ ಗಣಿ

***ನಮಗೆ ಅತ್ಯುಪಯುಕ್ತವಾದ ಗವ್ಯ ಉತ್ಪನ್ನಗಳಲ್ಲಿ ಒಂದು, ಗೋಮೇಧ ಅಥವಾ ಸೆಗಣಿ. ಇದು ನಮ್ಮ ನಿತ್ಯಜೀವನದಲ್ಲಿ ಅದೆಷ್ಟು ಉಪಯೋಗಕ್ಕೆ ಬರುತ್ತದೆ ಎಂಬುದರತ್ತ ಬೆಳಕು ಚೀರುವ ಒಂದು ಪುಟ್ಟ ಪ್ರಯತ್ನ.***

ಆಧುನೀಕರಣದ ಭರದಲ್ಲಿ ನಮ್ಮಲ್ಲಿನ ಬಹಳಷ್ಟು ಅಮೂಲ್ಯ ವಸ್ತುಗಳು ಪ್ರಾಮುಖ್ಯವನ್ನು ಕಳೆದುಕೊಳ್ಳುತ್ತಿವೆ. ಜನರಿಗೆ ಅವುಗಳ ಮಹತ್ವದ ಅರಿವೂ ಕೂಡ ಇಲ್ಲದಾಗುತ್ತಿದೆ. ಅಂಥ ಅಮೂಲ್ಯ ವಸ್ತುಗಳಲ್ಲಿ ಒಂದು ಗೋಮೇಧ. ಕಾರಣ, ನಾವು ಇಷ್ಟೆಲ್ಲ ಪ್ರಗತಿ ಹೊಂದುವುದಕ್ಕೆ ಮೂಲವೇ ಗೋಮೇಧ ಎಂಬುದರ ಅರಿವು ಇಲ್ಲದಿರುವುದು. ಗಮನಿಸಿ, ನಮ್ಮ ಸಾಮಾಜಿಕ ಸಮಸ್ಯೆಗಳಾದ ಆಹಾರ, ನೀರು, ಇಂಧನ, ವಸತಿ, ಆರೋಗ್ಯ, ಪೋಷಕಾಂಶ – ಇವುಗಳ ಕೊರತೆ, ಬಡತನ ಹಾಗೂ ನಿರುದ್ಯೋಗ ಇವುಗಳಿಗೆ ಪರಿಹಾರವಾಗಬಲ್ಲುದು ಗೋಮೇಧ. ಇದರ ಅರಿವು ಪುರಾತನ ಭಾರತದಲ್ಲಿತ್ತು. ಹಾಗಾಗಿಯೇ ಅಂದು ಅಷ್ಟು ಸಂಪದ್ಭರಿತವಾಗಿತ್ತು ನಮ್ಮ ದೇಶ.

ಗೋಮೇಧವೇ ನಮ್ಮ ಆರ್ಥಿಕಸ್ಥಿತಿಯ ಕೇಂದ್ರವಾದಾಗ–

- ಗೊಬ್ಬರಗಳು ಬಹಳ ಅಗ್ಗದ ಬೆಲೆಗೆ ದೊರೆಯಬಹುದು.
- ಆಹಾರದ ಬೆಳೆಯುವಿಕೆ ಹಾಗೂ ದೊರೆಯುವಿಕೆ ಅಗ್ಗವಾಗಬಹುದು.
- ಮಣ್ಣಿನ ಫಲವತ್ತತೆ ಎಂದೂ ಕಡಿಮೆಯಾಗಬಹುದು.
- ಇಂಧನವೂ ಅಗ್ಗವಾಗಬಹುದು.
- ಹಳ್ಳಿಗಳಲ್ಲಿ ವಸತಿ ಅಗ್ಗವಾಗಬಹುದು.
- ನಮ್ಮ ಪುರಾತನ ವೈದ್ಯಪದ್ಧತಿಯಾದ ಆಯುರ್ವೇದ ಮರೆಯಾಗದೆ, ಉಳಿದು ಬೆಳೆದೀತು.

ಗೋವಿಗೆ ವಯಸ್ಸಾದಂತೆ ಹಾಲು ದೊರಕದೇ ಇದ್ದೀತು, ಕೃಷಿ ಕೆಲಸಗಳಲ್ಲಿ ಉಪಯೋಗಕ್ಕೆ ಬರದಿದ್ದೀತು, ಸಂತಾನೋತ್ಪತ್ತಿಯೂ ಇಲ್ಲದಿದ್ದೀತು, ಆದರೆ ಗೋಮೇಧ ಸದಾ ಲಭ್ಯ ತಾನೆ? ಈಗ ಏನಾಗುತ್ತಿದೆಯೆಂದರೆ, ಸರಕಾರ ತನ್ನ ಲಾಭ ನೋಡುತ್ತಿದೆ. ರೈತರು ರಾಸಾಯನಿಕ ಗೊಬ್ಬರಗಳ ಬಳಕೆ ಮಾಡಿದರೆ, ಅದನ್ನು ತಯಾರು ಮಾಡುವ ಕಂಪೆನಿಗಳಿಂದ ಲಾಭ ಸಿಗುತ್ತದಲ್ಲ.

ಇಂದು ಗೋಮೇಧದ ಬಳಕೆ ಇಲ್ಲದಿರುವುದರಿಂದಾಗಿ ತಲೆದೋರಿರುವ ಕೆಲವು ಸಮಸ್ಯೆಗಳೆಂದರೆ–

- ಮಣ್ಣಿನ ಫಲವತ್ತತೆ ಕ್ರಮೇಣ ನಾಶವಾಗುತ್ತಿದೆ.
- ಆಹಾರ ಧಾನ್ಯಗಳು ದುಬಾರಿಯಾಗುತ್ತಿವೆ.
- ಧಾರ್ಮಿಕ ಆಚರಣೆಗಳು ಕಳೆಗುಂದುತ್ತಿವೆ.
- ಆಯುರ್ವೇದ ಅಗತ್ಯ ಮೂಲವಿಲ್ಲದೆ ತನ್ನ ಮಹತ್ವ ಕಳೆದುಕೊಳ್ಳುತ್ತಿದೆ.
- ಇಂಧನಗಳು ಮುಗಿಯುತ್ತಿವೆ ಹಾಗೂ ದುಬಾರಿಯಾಗುತ್ತಿವೆ.
- ಅತ್ಯಮೂಲ್ಯವಾದ ಬೆರಣಿಯ ಬೂದಿ ಈಗ ಸಿಗುತ್ತಿಲ್ಲ.
- ಕಾಡು ನಶಿಸುತ್ತಿದೆ.
- ವಸತಿ, ನಿರುದ್ಯೋಗ ಸಮಸ್ಯೆಗಳು ಹೆಚ್ಚುತ್ತಿವೆ.

ಒಂದೊಂದೇ ಅಂಶಗಳನ್ನು ಗಮನಿಸುತ್ತಾ ಹೋಗೋಣ.

### ಆಹಾರ-ಧಾನ್ಯಗಳ ಬೆಳೆಯುವಿಕೆ

ಗೋಮೇಧವು ಪ್ರಪಂಚದಲ್ಲೇ ಅತ್ಯಂತ ಅಗ್ಗ ಮತ್ತು ನಿರುಪದ್ರವಕಾರಿ ಗೊಬ್ಬರ. ಇದರ ಬಳಕೆಯಿಂದ ನಮ್ಮ ರೈತ ಅತೀ ಕಡಿಮೆ ಖರ್ಚಿನಲ್ಲಿ ಉತ್ತಮ ಗುಣಮಟ್ಟದ ಬೆಳೆ ಬೆಳೆಯಬಲ್ಲ. ಭಾರತದ ಆರ್ಥಿಕ ಪರಿಸ್ಥಿತಿಯನ್ನು ಸಮಸ್ಥಿತಿಯಲ್ಲಿಡಲು ಇದೊಂದೇ ಸಾಕು. ಆದರೆ ಸರಕಾರ ಏನು ಮಾಡುತ್ತಿದೆ ಎಂದರೆ, ಗೋಹತ್ಯೆಯನ್ನು ತಡೆಯದೆ ಮುಂದುವರಿಯಲು ಬಿಟ್ಟು ಗೋಮೇಧ ಅಲಭ್ಯವಾಗುವಂತೆ ಮಾಡುತ್ತಿದೆ. ರೈತರು, ಇದನ್ನು ಬಳಸದೆ, ಕೃಷಿಯಲ್ಲಿ ಪ್ರಗತಿ ಕಾಣದಿದ್ದಾಗ, ದುಬಾರಿ ರಾಸಾಯನಿಕ ಗೊಬ್ಬರಗಳನ್ನು ಬಳಸುತ್ತಾರೆ. ಹಾಗಾಗಿ ಆಹಾರಪದಾರ್ಥಗಳ ಬೆಲೆಯನ್ನು ಹೆಚ್ಚಿಸಬಹುದು. ಒಟ್ಟಿನಲ್ಲಿ ಹಣದುಬ್ಬರದ ಮೇಲೆ ಈ ಮೂಲಕ ಹಿಡಿತ ಸಾಧಿಸುವ ಪ್ರಯತ್ನ. ಇದಲ್ಲದೆ, ಈಗ ನೇಗಿಲ ಮೂಲಕ ಉಳುವ ಎತ್ತುಗಳು ಇಲ್ಲದ ಕಾರಣ, ರೈತರು ಒತ್ತಾಯ ಪೂರ್ವಕವಾಗಿ ಟ್ರ್ಯಾಕ್ಟರ್ ಬಳಸಲೇಬೇಕಾಗಿದೆ. ಇದರಿಂದಾಗಿ ಒಂದು ಕಾಲದಲ್ಲಿ ಸ್ವತಂತ್ರವಾಗಿದ್ದ ನಮ್ಮ ರೈತ, ಈಗ ಗೊಬ್ಬರ ಹಾಗೂ ಟ್ರ್ಯಾಕ್ಟರ್‌ಗೋಸ್ಕರ ಇತರರ ಮೇಲೆ ಅವಲಂಬಿತನಾಗಬೇಕಾಗಿದೆ. ರೈತರಲ್ಲಿ ರಾಸಾಯನಿಕ ಗೊಬ್ಬರಗಳ ಬಗ್ಗೆ ತಪ್ಪು ಅಭಿಪ್ರಾಯಗಳನ್ನು ಬೆಳೆಸಿ, ಅವರು ಅದನ್ನೇ ಬಳಸುವಂತೆ ಪ್ರೇರೇಪಿಸಲಾಗುತ್ತದೆ. ಅದಲ್ಲದೆ ಬೇರೆ ದಾರಿಯೇ ಇಲ್ಲ ಎಂಬಂತಾಗಿದೆ. ಯಾಕೆಂದರೆ ಪ್ರಾಕೃತಿಕ ಗೊಬ್ಬರವಾದ ಗೋಮೇಧ ಸಿಗುತ್ತಿಲ್ಲ. ರಾಸಾಯನಿಕ ಗೊಬ್ಬರಗಳು ಬೆಳೆಯನ್ನೇನೋ ಹೆಚ್ಚಿಸಿರಬಹುದು. ಆದರೆ ಬೆಳೆ ಬೆಳೆಯಲು ಬೇಕಾಗುವ ಖರ್ಚು ಹೆಚ್ಚಾಗಿದೆ ಜೊತೆಗೆ ಮಣ್ಣಿನ ಫಲವತ್ತತೆಯ ನಾಶದೊಂದಿಗೆ ಆಹಾರದ ರುಚಿ ಮತ್ತು ಅದರಲ್ಲಿನ ಪೋಷಕಾಂಶಗಳ ಮಟ್ಟ ಗಣನೀಯವಾಗಿ ಕಡಿಮೆಯಾಗುತ್ತಿದೆ.

ಒಂದುವೇಳೆ ನಮ್ಮ ಕೃಷಿಪದ್ಧತಿಯು ಕೇವಲ ಗೋವಿನ ಮೇಲೆ ಅವಲಂಬಿತವಾಗಿದ್ದಿದ್ದರೆ, ಟ್ರ್ಯಾಕ್ಟರಿಗಾಗಿ ಖರ್ಚು ಮಾಡುವ ಹಣ ಮತ್ತು ಅದರ ಬಡ್ಡಿ ಅಥವಾ ಅದರ ಬಾಡಿಗೆ ಉಳಿಯುತ್ತಿತ್ತು. ದುಬಾರಿಯಾದ ರಾಸಾಯನಿಕ ಗೊಬ್ಬರಗಳನ್ನು ಕೊಳ್ಳಲು ಬೇಕಾದ ಹಣ ಮತ್ತು ಅದರ ಬಡ್ಡಿ, ಕ್ರಿಮಿನಾಶಕಗಳ ಹಣ, ಮೋಟಾರು ಪಂಪುಗಳ ಹಣ ಮತ್ತು ಬಡ್ಡಿ, ಅದಕ್ಕಾಗಿ ಅಗತ್ಯವಿರುವ ಡೀಸೆಲ್ ಅಥವಾ ವಿದ್ಯುತ್‌ನ ಹಣ – ಇದೆಲ್ಲ ಉಳಿಯುತ್ತಿತ್ತು. ಒಟ್ಟಿನಲ್ಲಿ ಅನಗತ್ಯವಾದ ದೊಡ್ಡ ಖರ್ಚುಗಳೆಲ್ಲ ಉಳಿಯುತ್ತಿದ್ದವು. ಹಾಗಿಲ್ಲದ ಕಾರಣ ಇವತ್ತು ಭೂಮಿಯಿಂದ ಬೆಳೆ ತೆಗೆಯುವುದೆಂದರೆ ಬಹಳ ದುಬಾರಿಯಾಗಿಬಿಟ್ಟಿದೆ. ತತ್ ಪರಿಣಾಮ ಬೆಳೆದ ಬೆಳೆಯ ಬೆಲೆ ಏರಿಸುವಂತೆ ದೇಶಾದ್ಯಂತ ನೂರಾರು ಸ್ಟ್ರೈಕ್‌ಗಳು, ಪ್ರತಿಭಟನ ಮೆರವಣಿಗೆಗಳು.

ರೈತರು ಪಡೆದ ಈ ಹೆಚ್ಚುವರಿ ಹಣವು, ತೈಲ ಮತ್ತು ಡೀಸೆಲ್ ಉತ್ಪಾದಿಸುವ ದೇಶಗಳು, ರಾಸಾಯನಿಕ ಗೊಬ್ಬರ, ಕೀಟನಾಶಕ, ಟ್ರ್ಯಾಕ್ಟರ್‌ಗಳನ್ನು ತಯಾರಿಸುವ ಕಂಪೆನಿಗಳು ಹಾಗೂ ಸರಕಾರಿ ಸಾಲ ನೀಡುವ ಹಲವು ಸಂಸ್ಥೆಗಳು –ಇವುಗಳ ಮಧ್ಯೆ ಹಂಚಿಹೋಗುತ್ತಿದೆ. ರೈತ ಮೊದಲಿದ್ದ ಆ ಬಡಪರಿಸ್ಥಿತಿಯಲ್ಲೇ ಉಳಿದಿದ್ದಾನೆ!

## ಮಣ್ಣಿನ ಫಲವತ್ತತೆ

ಆಹಾರ ಧಾನ್ಯಗಳ ಬೆಳೆಗಳಿಂದಾಗಿ ನಷ್ಟವಾದ ಪೋಷಕಾಂಶ ಮರುಪೂರಣೆಯಾಗದಿದ್ದರೆ, ಪ್ರತಿ ಬೆಳೆಯಲ್ಲೂ ಮಣ್ಣಿನ ಫಲವತ್ತತೆ ನಶಿಸುತ್ತಾ ಬರುತ್ತದೆ. ಪರಿಣಾಮ, ಅಲ್ಲಿ ಬೆಳೆದ ಧಾನ್ಯಗಲ್ಲೂ ಪೋಷಕಾಂಶಗಳು ಕಡಿಮೆಯಾಗಲಾರಂಭಿಸಿವೆ.

ಈ ಪ್ರಾಕೃತಿಕ ಗೊಬ್ಬರದ ಬಗೆಗೆ ನಡೆದ ಒಂದು ಪ್ರಯೋಗ ಹೀಗಿದೆ: (ಡಾ. ಸತೀಶ್ಚಂದ್ರ ದಾಸ್‌ಗುಪ್ತ ಅವರು ಬರೆದ "Cow in India" ಎಂಬ ಪುಸ್ತಕದ ೪೩ ಹಾಗೂ ೫೬೨ನೇ ಪುಟದಲ್ಲಿ ಈ ಉಲ್ಲೇಖವನ್ನು ಕಾಣಬಹುದು.) ಒಂದೇ ರೀತಿಯ ವಿಸ್ತೀರ್ಣದ ಮೂರು ಜಮೀನುಗಳಲ್ಲಿ ಮೊದಲನೆಯದ್ದನ್ನು ಎರಡೂವರೆ ಇಂಚಿನಷ್ಟು ಪ್ರಾಕೃತಿಕ ಗೊಬ್ಬರವನ್ನು ಬಳಸಿ, ಎರಡನೆಯದ್ದನ್ನು ಅರ್ಧ ಇಂಚಿನಷ್ಟು ಹಾಗೂ ಮೂರನೆಯದ್ದನ್ನು ಸ್ವಲ್ಪವೂ ಪ್ರಾಕೃತಿಕ ಗೊಬ್ಬರ ಬಳಸದೆ ಅಕ್ಕಿ ಬೆಳೆಯಲಾಯಿತು. ಫಲಿತಾಂಶದಿಂದ ಕಂಡುಬಂದ ಅಂಶವೇನೆಂದರೆ, ಮೊದಲನೇ ಜಮೀನಿನಲ್ಲಿ ಬೆಳೆದ ಅಕ್ಕಿಯ ಪ್ರಮಾಣ ಮೂರನೇ ಜಮೀನಿನ ಅಕ್ಕಿಗಿಂತ ಆರು ಪಟ್ಟು ಹಾಗೂ ಹುಲ್ಲಿನ ಪ್ರಮಾಣ ಮೂರೂವರೆ ಪಟ್ಟು ಅಧಿಕವಾಗಿತ್ತು! ಇನ್ನೊಂದು ಕಡೆ ತೆಲಾನ್ ಖೇರಿ ಎಂಬ ಪ್ರದೇಶದಲ್ಲಿ ಕೂಡ ಈ ರೀತಿ, ಗೋಮೇಧ ಬಳಸಿ ಬೆಳೆ ಬೆಳೆದಾಗ ಕಂಡುಬಂದ ವಾರ್ಷಿಕ ಫಲಿತಾಂಶವೂ ಆಶ್ಚರ್ಯಕರವಾಗಿತ್ತು. ಆರು ವರ್ಷಗಳಲ್ಲಿ ಧಾನ್ಯದ ಬೆಳೆ ೧೭೭.೫% ಹಾಗೂ ಹುಲ್ಲಿನ ಬೆಳೆ ೫೪.೫% ಅಧಿಕವಾಗಿತ್ತು! ರಾಸಾಯನಿಕ ಗೊಬ್ಬರದಿಂದ ಇದು ಸಾಧ್ಯವಾದೀತೆ, ಭೂಮಿಯ ಫಲವತ್ತತೆಗೆ ಕಿಂಚಿತ್ತೂ ಧಕ್ಕೆ ತಾರದೆ? ಪ್ರತಿ ವರ್ಷ ೧,೫೦೦ ಕೋಟಿಯಷ್ಟು ಹಣ ಈ ರಾಸಾಯನಿಕಗಳ ಬಳಕೆಗಾಗಿ ಖರ್ಚಾಗುತ್ತಿದೆ. ಈ ಖರ್ಚಿಗಾಗಿ ಸರಕಾರ ನೀಡುತ್ತಿರುವ ಸಬ್ಸಿಡಿ, ೪೦೦ ಕೋಟಿ ರೂಪಾಯಿಗಳು, ಅದೂ ತೆರಿಗೆಯ ಮೂಲಕ ನಮ್ಮ ಜನರಿಂದಲೆ ಪಡೆದದ್ದು. ಇನ್ನುಳಿದ ೧,೧೦೦ ಕೋಟಿ ರೂಪಾಯಿಗಳನ್ನು ಬೆಳೆಯ ಬೆಲೆಯೇರಿಸುವ ಮೂಲಕ ಸರಿದೂಗಿಸಲು ಪ್ರಯತ್ನಿಸುತ್ತಾರೆ. ಹಾಗಾಗಿ ಈ ರಾಸಾಯನಿಕಗಳ ಬಳಕೆಯಿಂದ ಬೆಳೆದ ಆಹಾರ ಪದಾರ್ಥಗಳನ್ನು ಕೊಳ್ಳುವ ಬಡಜನತೆ, ಒಂದು ಕಡೆ ಸರಕಾರ ಹಾಗೂ ಇನ್ನೊಂದು ಕಡೆ ಬೆ(ಲೆ)ಳೆಗಾರ ಇವರ ಮಧ್ಯೆ ಬಳಲುತ್ತಿದೆ. ಇದು ಹಣದುಬ್ಬರ ಹೆಚ್ಚಾಗಲೂ ಕಾರಣವಾಗುತ್ತಿದೆ.

## ನಿರುದ್ಯೋಗ

ಗೋಹತ್ಯೆ ಮಿತಿಮೀರಿ, ಗೋಮೇಧ ಅಲಭ್ಯವಾಗುತ್ತಿರುವ ಹಿನ್ನೆಲೆಯಲ್ಲಿ ಅದೆಷ್ಟೋ ಸಾವಿರ ಹಿಂದೂ ಹಾಗೂ ಮುಸಲ್ಮಾನ ಕುಟುಂಬಗಳು ನಿರುದ್ಯೋಗಿಗಳಾಗುತ್ತಿವೆ, ಎಂಬುದು ಗೊತ್ತಾ? ಈ ಅಂಶಗಳನ್ನು ಗಮನಿಸಿ:

- ಗೋವಿನ ಬೆರಣಿ ಹಾಗೂ ಗೋಮಾಂಸ ಈ ಎರಡೂ ಆರ್ಥಿಕ ಮೂಲಗಳೇ ಆಗಿವೆ. ಒಂದು ಗೋವಿನ ಹತ್ಯೆಯಾದರೆ, ಅದರ ಮಾಂಸವು ಆ ಕಸಾಯಿಗಳಿಗೆ ಕೇವಲ ಒಂದು ದಿನಕ್ಕಷ್ಟೇ ಲಭ್ಯ. ಮರುದಿನದ ವ್ಯಾಪಾರಕ್ಕೆ ಇನ್ನೊಂದು ಗೋವಿನ ಹತ್ಯೆಯಾಗಬೇಕು. ಆದರೆ, ಅದೇ ಗೋವನ್ನು ಕೊಲ್ಲದೇ ಇದ್ದರೆ, ಸುಮಾರು ೫–೬ ಸಾವಿರ ಬೆರಣಿಗಳನ್ನು ಪ್ರತಿ ವರ್ಷ ಅದರ ಸೆಗಣಿಯಿಂದ ತಯಾರಿಸಬಹುದು ಹಾಗೂ ಇದನ್ನು ಮಾರುವ ಮೂಲಕ ಬರುವ ಹಣ, ಒಬ್ಬ ವ್ಯಕ್ತಿಗೆ ಒಂದು ವರ್ಷದ ಜೀವನಕ್ಕೆ ಸಾಕು! ಬೇರೆ ಯಾವುದೇ ರೀತಿಯ ಉಪಯೋಗ ಇಲ್ಲದಿರುವಾಗಲೂ, ಒಂದು ಗೋವು ಕನಿಷ್ಠ ೫ ವರ್ಷ ಜೀವಿಸಿದರೆ, ಒಬ್ಬ ಮನುಷ್ಯನಿಗೆ ೫ ವರ್ಷಗಳ ಕಾಲ ಉದ್ಯೋಗ ನೀಡಬಲ್ಲುದು. ಆ ಗೋವನ್ನು ಕೊಂದರೆ, ಕೇವಲ ಒಂದು ಅಥವಾ ಎರಡೇ ದಿನದ ಉದ್ಯೋಗ!
- ಗುಜರಾತಿನ ಕಸಾಯಿಗಳು ಹೇಳುವಂತೆ, ಅವರು ದಿನಕ್ಕೆ ೭೦ ಗೋವುಗಳನ್ನು ಹತ್ಯೆಮಾಡುತ್ತಾರೆ. ಅಂದರೆ ಸುಮಾರು ೨೫,೦೦೦ ಗೋವುಗಳು, ಪ್ರತಿ ವರ್ಷ! ಹಾಗಾಗಿ ಬೆರಣಿ ಮಾರುವ ಮೂಲಕ ಜೀವನ ನಡೆಸುವ ೨೫,೦೦೦ ಮಹಿಳೆಯರು, ಹಿಂದೂವೇ ಇರಬಹುದು ಮುಸ್ಲಿಮ ಆಗಿರಬಹುದು, ನಿರುದ್ಯೋಗಿಗಳಾಗಿಬಿಡುತ್ತಾರೆ.
- ಗೋಹತ್ಯೆ ಹಾಗೂ ಅದರ ಚರ್ಮದ ರಫ್ತಿನಿಂದಾಗಿ ಇಡೀ ಹರಿಜನ ಸಮುದಾಯ ನಿರುದ್ಯೋಗದಿಂದ ನರಳುತ್ತಿದೆ. ಯಾಕೆಂದರೆ, ಅವರಿಗೆ ಪ್ರಾಕೃತಿಕವಾಗಿ ಸತ್ತ ಗೋವಿನಿಂದ ಸಿಗುತ್ತಿದ್ದ ಚರ್ಮ ಈಗ ಸಿಗುತ್ತಿಲ್ಲ. ಕಸಾಯಿಖಾನೆಗಳಲ್ಲಿ ಗೋವನ್ನು ಒತ್ತಾಯಪೂರ್ವಕವಗಿ ಕೊಂದು, ಅದರ ಚರ್ಮವನ್ನು ಸಂಸ್ಕರಿಸಿ ಮಾರಲಾಗುತ್ತಿದೆ. ಚರ್ಮದ ಉತ್ಪನ್ನಗಳನ್ನು ತಯಾರಿಸುವ ದೈತ್ಯ ಕಂಪೆನಿಗಳು ಇವುಗಳನ್ನೇ ಕೊಳ್ಳುತ್ತಿವೆ, ಗುಣಮಟ್ಟ ಒಳ್ಳೆಯದಿರುತ್ತದೆಂಬ ಕಾರಣಕ್ಕೆ.
- ದನದ ಸೆಗಣಿ, ಮಣ್ಣು ಹಾಗೂ ಕುದುರೆಯ ಸೆಗಣಿಯ ಮಿಶ್ರಣವನ್ನು ಬಳಸಿ ಕಟ್ಟಿದ ಮನೆಗೆ ಮಣ್ಣಿನ ಇಟ್ಟಿಗೆಯ ಅಂದವಾದ ಮೇಲ್ಹಾವಣಿಯೊಂದನ್ನು ಮಾಡಿಬಿಟ್ಟರೆ ಆ ಮನೆ ಸುಭದ್ರ. ಹಳ್ಳಿಯಲ್ಲಿನ ಕುಂಬಾರರು ಮಾತ್ರ ಅಂಥ ಮನೆ ಕಟ್ಟಿಯಾರು. ಪ್ರಸ್ತುತ ಇರುವ, ಮಣ್ಣು ಮತ್ತು ಸೆಗಣಿಯಿಂದ ಮಾಡದ ಮನೆಗಳಿಗೆ, ಈ ಇಟ್ಟಿಗೆಗಳ ಮೇಲ್ಹಾವಣಿ ಮಾಡಲು ಸಾಧ್ಯವಿಲ್ಲ. ಹಳ್ಳಿಗಳಲ್ಲಿ ಮನೆಕಟ್ಟಲು ಗೋಮೇಧವೆ ಮೂಲವಾಗಿತ್ತು. ಒಂದುವೇಳೆ ಹಳ್ಳಿಗಳಲ್ಲಿ ಕೇವಲ ಈ ಕುಂಬಾರರೇ ಮನೆ ಕಟ್ಟುವವರಾಗಿದ್ದಿದ್ದರೆ, ಮೂರು ಕೋಟಿ ಮನೆಗಳನ್ನು ಕಟ್ಟಲು ಸುಮಾರು ೫೫ ಲಕ್ಷ ಕುಂಬಾರ ಕುಟುಂಬಗಳು ಬೇಕಾದೀತು. ಅಷ್ಟೇ ಪ್ರಮಾಣದ, ಮಣ್ಣಿನ ಇಟ್ಟಿಗೆ ಮಾಡುವ ಕುಟುಂಬಗಳೂ ಬೇಕಾದೀತು. ಹಾಗಾಗಿ ಗೋಮೇಧವು ಸುಮಾರು ಮೂರು ಕೋಟಿ ಕುಂಬಾರ ಕುಟುಂಬಗಳಿಗೆ ಉದ್ಯೋಗ ದೊರೆಯುವುದಕ್ಕೆ ಮೂಲ. ಈಗ ಅದು ಸಿಗುತ್ತಿಲ್ಲವಾದ್ದರಿಂದ ಕುಂಬಾರ ಕುಟುಂಬಗಳು ಉದ್ಯೋಗವಿಲ್ಲದೆ ಪಟ್ಟಣಗಳಿಗೆ ವಲಸೆಹೋಗಿ ಅಲ್ಲಿ ಬೀದಿಯಲ್ಲಿ ಮಲಗುವ ಪರಿಸ್ಥಿತಿಗೆ ಬಂದಿವೆ.

–ನಮ್ಮ ಆರ್ಥಿಕ ಪರಿಸ್ಥಿತಿ ಹೇಗೆ ಹದಗೆಡುತ್ತಿದೆ ಎಂಬುದಕ್ಕೆ ಇವು ಕೆಲವೇ ಕೆಲವು ಉದಾಹರಣೆಗಳು. ನಮ್ಮಲ್ಲಿನ ನಿರುದ್ಯೋಗಕ್ಕೆ ಸರಕಾರವೆ ನೇರ ಹೊಣೆಯೆಂದರೆ ತಪ್ಪಾಗಲಾರದು. ಪಾಶ್ಚಿಮಾತ್ಯ ಕಂಪೆನಿಗಳಿಂದ ಬರುವ ಲಾಭದ ಆಸೆಗೆ, ಸ್ಥಳೀಯ ಆರ್ಥಿಕ ಮೂಲದ ನಾಶಮಾಡಲಾಗುತ್ತಿದೆ. ಈ ಕಂಪೆನಿಗಳು ಕೆಲವಾರು ಸಾವಿರ ಜನರಿಗೆ ಉದ್ಯೋಗ ಒದಗಿಸಿರಬಹುದು, ಆದರೆ ಲಕ್ಷಾಂತರ ಜನ ನಿರುದ್ಯೋಗಿಗಳಾಗಿಯೇ ಇದ್ದಾರೆ.

**ಧಾರ್ಮಿಕ ಆಚರಣೆಗಳು**

ಹಿಂದೂ ಸಂಸ್ಕೃತಿಯಲ್ಲಿ ಮನುಷ್ಯ ಜೀವನಕ್ಕೆ ಹದಿನಾರು ಸಂಸ್ಕಾರಗಳಿವೆ. ಪ್ರತಿಯೊಂದು ಸಂಸ್ಕಾರಕ್ಕೂ ಗೋಮೇಧ ಬೇಕೇಬೇಕು. ಯಾವುದೇ ಧಾರ್ಮಿಕ ಆಚರಣೆಗಳನ್ನು ಮಾಡುವಾಗ ಮನಸ್ಸು, ಮಾನಸಿಕ ಸ್ಥಿತಿ, ಸುತ್ತಲಿನ ಪರಿಸರ ಹಾಗೂ ಆಚರಣೆಗೆ ಬಳಸುವ ವಸ್ತುಗಳನ್ನು ಪರಿಶುದ್ಧೀಕರಿಸಬೇಕಾದ್ದು ಅತ್ಯಗತ್ಯ. ಧಾರ್ಮಿಕ ಕಾರ್ಯಗಳನ್ನು ನಡೆಸುವ ಸ್ಥಳವನ್ನು ಶುದ್ಧೀಕರಿಸಿ ಗೋಮೇಧವನ್ನು ಬಳಿಯಬೇಕು. ಬೆರಣಿ, ಶ್ರೀಗಂಧ ಇತ್ಯಾದಿಗಳಿಂದ ಬೆಂಕಿಯನ್ನು ಉರಿಸಬೇಕು, ಸುತ್ತಲಿನ ವಾತಾವರಣವನ್ನು ಸುಗಂಧಮಯವಾಗಿಸಿ ಶುದ್ಧೀಕರಿಸಲು. ಸೀಮೆಎಣ್ಣೆ, ವಿದ್ಯುತ್ ಅಥವಾ ಗ್ಯಾಸ್ ಒಲೆಗಳಿಂದ ಇದು ಸಾಧ್ಯವಿಲ್ಲ. ಮನಃ ಶುದ್ಧೀಕರಣ ಹಾಗೂ ಆತ್ಮ ಶುದ್ಧೀಕರಣಾಕ್ಕಾಗಿ ಧಾರ್ಮಿಕ ಸುಕಾರ್ಯಗಳನ್ನು ಮಾಡುವಾಗ, ಪಂಚಗವ್ಯ ಅಂದರೆ ಗೋವಿನ ಹಾಲು, ತುಪ್ಪ, ಮೊಸರು, ಗೋಮೇಧ ಹಾಗೂ ಗೋಮೂತ್ರದ ಮಿಶ್ರಣವನ್ನು ಸೇವಿಸಬೇಕು.

ಗೋಹತ್ಯೆ ನಿಷೇಧಿತವಾಗಿದ್ದ ಭಾರತದ ರಾಜ್ಯಗಳಲ್ಲಿ, ಸುಮಾರು ೧೯೧೨೫ರ ವರೆಗೆ ಮನುಷ್ಯನ ದೇಹದ ಅಂತ್ಯಸಂಸ್ಕಾರಕ್ಕೆ ಬೆರಣಿಯನ್ನೇ ಬಳಸಲಾಗುತ್ತಿತ್ತು. ಮುಂದೆ ಇದು ಅಲಭ್ಯವಾಗುತ್ತಿದ್ದಂತೆ, ಕಟ್ಟಿಗೆಯಲ್ಲಿ ಸುಡಲಾರಂಭಿಸಿದರು. ಗಮನಿಸಬೇಕಾದ ಅಂಶವೇನೆಂದರೆ, ಒಂದು ಮೃತದೇಹವನ್ನು ಸರಿಯಾಗಿ ಸುಡಲು ಸರಿಸುಮಾರು ನಾಲ್ಕು ಕ್ವಿಂಟಾಲ್ ಕಟ್ಟಿಗೆ ಬೇಕು. ಈಗೀಗ ಕಾಡಿನ ನಾಶದಿಂದಾಗಿ ಕಟ್ಟಿಗೆಯೂ ಅಲಭ್ಯವಾಗುತ್ತಿದೆ, ದೊರೆತರೂ ಅದಕ್ಕೆ ಬಹಳ ಬೆಲೆತೆರಬೇಕಾಗುತ್ತದೆ. ಹಾಗಾಗಿ ಕೆಲವು ಕಡೆಗಳಲ್ಲಿ, ಒಣಹುಲ್ಲನ್ನು ಬಳಸಲು ಶುರುಮಾಡಿದ್ದಾರೆ. ನೋಡಿ, ಮನುಷ್ಯ ಜೀವನದ ಕೊನೆಯ ಸಂಸ್ಕಾರವಾದ ಅಗ್ನಿಸಂಸ್ಕಾರವೂ ಆಗಬೇಕಾದ ರೀತಿಯಲ್ಲಿ ಆಗುತಿಲ್ಲ. ಒಂದು ಗೋವಿನ ಹತ್ಯೆ ವರ್ಷಕ್ಕೆ ೧೦ ಜನರ ಅಗ್ನಿಸಂಸ್ಕಾರದ ಮೇಲೆ ಪರಿಣಾಮ ಬೀರುತ್ತದೆ. ವಯಸ್ಸಾದ ಗೋವನ್ನು ಕೊಲ್ಲದೆ, ಅದು ಹತ್ತು ವರ್ಷ ಬದುಕಿದ್ದರೆ, ೧೦೦ ಜನರ ಅಂತ್ಯಸಂಸ್ಕಾರಕ್ಕಾಗುವಷ್ಟು ಬೆರಣಿಯನ್ನು ಅದು ನೀಡಬಲ್ಲುದು. ವೈಜ್ಞಾನಿಕ ಸಂಶೋಧನೆಗಳ ಪ್ರಕಾರ ಬೆರಣಿಯನ್ನು ಹೊರತು ಪಡಿಸಿ, ಕೇವಲ ಕಟ್ಟಿಗೆಯನ್ನು ಅಗ್ನಿಸಂಸ್ಕಾರಕ್ಕೆ ಬಳಸಿದರೆ, ಪ್ರತಿಮರಕ್ಕೆ ೧೫ ಲಕ್ಷ ರೂಪಾಯಿ ಖರ್ಚಾಗುತ್ತದೆ.

**ಆಯುರ್ವೇದ**

ಬೆರಣಿಯ ಅಲಭ್ಯತೆಯಿಂದಾಗಿ ಕಾಡುಗಳು ನಾಶವಾಗುತ್ತಿವೆ. ಇದರಿಂದ ಅಲ್ಲಿ ದೊರೆಯುವ ಅನೇಕ ಮೂಲಿಕೆಗಳೂ ನಾಶವಾಗುತ್ತಿವೆ. ಆಯುರ್ವೇದದಲ್ಲಿ ಗಿಡಮೂಲಿಕೆಗಳಷ್ಟೇ ಪ್ರಮುಖವಾಗಿ ಉಪಯೋಗಿಸಲ್ಪಡುವುದು ಭಸ್ಮ. ಬೆರಣಿಯಿಂದ ಮಾಡಿದ ಬೆಂಕಿಯಿಂದಲೆ ಈ ಭಸ್ಮ ತಯಾರಾಗಬೇಕು. ಕಲ್ಲಿದ್ದಲು ಅಥವಾ ವಿದ್ಯುತ್ ಬಳಸಿ, ಭಸ್ಮ ತಯಾರಿಸಿದರೆ ಅದು ವಾಹನವನ್ನು ಪೆಟ್ರೋಲ್ ಬಿಟ್ಟು ಸೀಮೆಎಣ್ಣೆಯಿಂದ ಓಡಿಸಿದಂತಾಗುತ್ತದೆ. ಇನ್ನು, ಹಲವಾರು ಔಷಧಿಗಳು ಶುದ್ಧೀಕರಿಸಲ್ಪಡಬೇಕು, ಅದೂ ಗೋಮೇಧದಿಂದ. ಆದರೆ ಇತ್ತೀಚೆಗೆ ಈ ಪದ್ಧತಿ ಪ್ರಕಾರ ಆಯುರ್ವೇದ ಔಷಧಿಗಳು ತಯಾರಾಗದ ಕಾರಣ, ಅವುಗಳು ಏನೂ ಪರಿಣಾಮ ಬೀರುತ್ತಿಲ್ಲ. ಹಾಗಾಗಿ ಜನರಿಗೆ ಆಯುರ್ವೇದದ ಮೇಲೆ ನಂಬಿಕೆ ಕಡಿಮೆಯಾಗುತ್ತಿದೆ. ನಮ್ಮ ಪುರಾತನ ವೈದ್ಯಪದ್ಧತಿ ಮಹತ್ವವನ್ನು ಕಳೆದುಕೊಳ್ಳುತ್ತಿದೆ.

**ಬೂದಿ**

ಬೆರಣಿಯ ಬೂದಿಯ ಬೆಲೆ ಎಷ್ಟಿದ್ದೀತು? ಈ ಬೂದಿಗೆ ನಮ್ಮನ್ನು ವಿಶ್ವಬ್ಯಾಂಕ್‌ನ ಹಂಗಿನಿಂದ ಹೊರತರುವಷ್ಟು ಶಕ್ತಿಯಿದೆ! ಅಡಿಗೆ ಮಾಡಲು ಬಳಸಿದ ಬೆರಣಿಯ ಬೂದಿಗೆ ಬೆಲೆಯೇ ಎಂದು ಅನಿಸಬಹುದು. ಆದರೆ ಅದು ಅಷ್ಟು ಅಮೂಲ್ಯವಾದದ್ದು. ಆಹಾರಧಾನ್ಯಗಳ ಸಂಸ್ಕರಣೆಯಲ್ಲಿ ಅತ್ಯುಪಯುಕ್ತವಾದದ್ದು! ರಾಜರ ಕಾಲದಲ್ಲಿ ಧಾನ್ಯಗಳನ್ನು, ಅಷ್ಟೇ ಪ್ರಮಾಣದ ಬೆರಣಿಬೂದಿ ಸೇರಿಸಿ ಸಂಸ್ಕರಿಸಿ ಇಡಲಾಗುತ್ತಿತ್ತು. ಇದು ಸುಮಾರು ೧೨ ವರ್ಷಗಳವರೆಗೆ ಏನೂ ಆಗದೆ ಉಳಿಯುತ್ತಿತ್ತು. ನಾವೂ ಕೂಡ ಇದನ್ನು ಮಾಡಬಹುದು. ಧಾನ್ಯವನ್ನು ಈ ಬೂದಿಯೊಂದಿಗೆ ಮಿಶ್ರಣಮಾಡಿ, ಮಣ್ಣಿನಿಂದ ಮಾಡಿದ ಟ್ಯಾಂಕ್‌ಗಳಲ್ಲಿ ಶೇಖರಿಸಿಡಬೇಕು. ಇದು ೨–೩ ವರ್ಷಗಳವರೆಗೆ ಕೆಡದೆ ಹಾಗೇ ಉಳಿಯುತ್ತದೆ! ಆದರೆ ಜನರಿಗೆ ಇವತ್ತು ಈ ಉಪಯೋಗವೆ ಮರೆತುಹೋಗಿದೆ. ವಿಶ್ವಬ್ಯಾಂಕ್‌ನಿಂದ ಮಿಲಿಯಗಟ್ಟಲೆ ಹಣವನ್ನು ಪಡೆದು, ಹವಾನಿಯಂತ್ರಿತ ಆಹಾರಸಂಸ್ಕರಣಾ ಕೊಠಡಿಗಳನ್ನು ಕಟ್ಟಿಸಲಾಗುತ್ತಿದೆ. ವಿಷಕಾರಿ ಕೀಟನಾಶಕಗಳನ್ನು ಅವುಗಳ ಮೇಲೆ ಪ್ರಯೋಗಿಸಿ, ಶೇಖರಿಸಿಡಲಾಗುತ್ತದೆ. ವಿಶ್ವಬ್ಯಾಂಕ್ ಹಾಗೂ ಈ ಕೀಟನಾಶಕಗಳನ್ನು ತಯಾರಿಸುವ ಅಂತಾರಾಷ್ಟ್ರೀಯ ಕಂಪೆನಿಗಳು, ನಮ್ಮಲ್ಲಿ ಗೋಮೇಧ ಅಲಭ್ಯತೆಯ ಲಾಭ ಪಡೆಯುತ್ತಿವೆ!

ಒಂದು ವಯಸ್ಸಾದ ಗೋವು ನಮ್ಮ ಜಮೀನಿನಲ್ಲಿ ಕೆಲಸ ಮಾಡುವ ಸಾಮರ್ಥ್ಯವನ್ನು ಹೊಂದಿಲ್ಲದೇ ಇರಬಹುದು. ಆದರೆ ಅದು ತನ್ನ ಕೊನೆಯುಸಿರಿರುವವರೆಗೂ ಗೋಮೇಧವನ್ನು ನೀಡುತ್ತದೆ. ಹಣದುಬ್ಬರದಿಂದ ದೂರ ಮಾಡುವ, ರೋಗ–ರುಜಿನಗಳನ್ನು ದೂರಮಾಡುವ ಹಾಗೂ ದೇಶದ ಆರ್ಥಿಕತೆಯ ಮೂಲ ಗೋಮೇಧ. ಹೊಲದಲ್ಲಿ ಕೆಲಸ ಮಾಡುವ ಆಳು, ತನಗೆ ಸಂಬಳ ಜಾಸ್ತಿ ಮಾಡಬೇಕು, ಬೋನಸ್ ನೀಡಬೇಕು ಎಂದೆಲ್ಲ ಗಲಾಟೆ ಮಾಡಬಹುದು. ಆದರೆ ಗೋವು ಇದ್ಯಾವುದನ್ನೂ ಬಯಸದೆ, ನಾವು ಅದಕ್ಕೆ ನೀಡಿದ್ದಕ್ಕಿಂತ ನೂರು ಪಟ್ಟು ಅಧಿಕ ಲಾಭವನ್ನು ನಮಗೆ ನೀಡುತ್ತದೆ.

**– ವೇಣಿಶಂಕರ್ ಎಮ್. ವಸು**

**(ಕನ್ನಡಕ್ಕೆ – ಅನುಶ್ರೀ ಎಲ್.)**

# ಗೋವು ಮತ್ತು ಕೃಷಿ

**ಶ್ರೀ ಸುಭಾಷ್ ಪಾಳೇಕರರ 'ಶೂನ್ಯ ಬಂಡವಾಳದ ಲಾಭದಾಯಕ ನೈಸರ್ಗಿಕ ಕೃಷಿ'ಯ ಪರಿಚಯಾತ್ಮಕ ಪುಸ್ತಿಕೆ**

(ಕಳೆದ ಸಂಚಿಕೆಯಿಂದ ಮುಂದುವರೆದುದು) **– ಪರೀಕ್ಷಿತ ತೋಳ್ಪಾಡಿ ಎಸ್.**

ಸೆಗಣಿಯಲ್ಲಿರುವ ೩೬ ಬಗೆಯ ಥಿಯೋ ಆಕ್ಸಿಡೆಂಟ್ ಬ್ಯಾಕ್ಟೀರಿಯಾಗಳು, ಫೆರೋಸ್ ಜೀವಾಣು, ಮೈಕೋರೈಜಾ ಫಂಗಸ್ ಇತ್ಯಾದಿಗಳು ಸಸ್ಯವೊಂದರ ಇತರೆಲ್ಲ ಸಸ್ಯ ಪೋಷಕಾಂಶಗಳನ್ನು ಪೂರೈಸುತ್ತವೆ.

ಪ್ರಾಚೀನರ ಗೋವಿನಲ್ಲಿ ಮೂವತ್ತಮೂರು ಕೋಟಿ ದೇವತೆಗಳಿದ್ದಾರೆ, ಸ್ವತಃ ಪ್ರಕೃತಿ ಸ್ವರೂಪಳಾದ ಲಕ್ಷ್ಮಿಯೇ ಗೋವಿನ ಸೆಗಣಿ, ಮೂತ್ರಗಳಲ್ಲಿ ನೆಲೆಸಿದ್ದಾಳೆ ಎನ್ನುವ ವರ್ಣನೆಗಳು ಅದೆಂಥ ರೋಚಕವಾದ ರೂಪಕಗಳು ಅಲ್ಲವೇ?

ಜೀವಾಮೃತಕ್ಕೆ ಒಂದು ಹಿಡಿ ಮಣ್ಣು ಏಕೆಂದರೆ, ನಮ್ಮ ಪ್ರದೇಶದ ಪರಿಚಯವನ್ನು ಆ ಸೂಕ್ಷ್ಮಾಣು ಜೀವಿಗಳಿಗೆ ಕೊಡುವುದಕ್ಕೆ. ನಮ್ಮ ಭೂಮಿಯನ್ನು ಆ ಜೀವಾಣುಗಳು ಸೂಕ್ಷ್ಮವಾಗಿ ಅರ್ಥೈಸಿಕೊಳ್ಳುವ ಶಕ್ತಿಯನ್ನು ಪಡೆದಿವೆ. ಯಾವ ನ್ಯೂನತೆಗಳು, ಕೊರತೆಗಳು ಅಲ್ಲಿದ್ದರೂ ಪ್ರಕೃತಿ ತುಂಬು ಕರುಣೆಯಿಂದ ಅದನ್ನು ತುಂಬಿಕೊಡುತ್ತದೆ.

### ಮುಚ್ಚಿಗೆ ಮತ್ತು ಅಂತರ ಬೆಳೆಗಳು

ಮುಚ್ಚಿಗೆಯು ಭೂಮಿ ತಾಯಿಯ ಮೇಲುದವಿದ್ದಂತೆ ಎಂದು ಪಾಳೇಕರ್ ಅದರ ಮಹತ್ವವನ್ನು ವಿವರಿಸುತ್ತಾರೆ.

ಮುಚ್ಚಿಗೆಯಲ್ಲಿ ಮೂರು ವಿಧ:

೧. ಮಣ್ಣಿನ ಮುಚ್ಚಿಗೆ: ಭತ್ತ, ರಾಗಿ, ಕಬ್ಬು ಇತ್ಯಾದಿಗಳನ್ನು ಬೆಳೆಯುವ ಸಂದರ್ಭದಲ್ಲಿ ನಾವು ಮಾಡುವ ನೇಗಿಲಿನ ಉಳುಮೆ, ಬಹುವಾರ್ಷಿಕ ಇಲ್ಲವೇ ವಾರ್ಷಿಕ ಬೆಳೆಗಳನ್ನು ನೆಡಲು ತೋಡುವ ಸಣ್ಣ ಗುಂಡು, ಮಧ್ಯದಲ್ಲಿ ಕಳೆ ನಿಯಂತ್ರಣಕ್ಕಾಗಿ ಆಗೊಮ್ಮೆ ಈಗೊಮ್ಮೆ ಮಾಡಬಹುದಾದ ತೆಳುವಾದ ಅಗೆತ ಇವೆಲ್ಲ ಮಣ್ಣಿನ ಮುಚ್ಚಿಗೆ ಎಂದು ಕರೆಯಲ್ಪಡುತ್ತವೆ.

೨. ಒಣ ಮುಚ್ಚಿಗೆ: ಭೂಮಿಗೆ ನಾವು ಹೊದಿಕೆಯಾಗಿ ಕೊಡುವ ತರಗೆಲೆಯ ಹಾಸು, ಬೆಳೆ ತನ್ನ ಫಲ ನೀಡಿದ ಮೇಲಿನ ಅವಶೇಷ, ಕಸಕಡ್ಡಿಗಳನ್ನು ಹರಡುವುದು ಇವೆಲ್ಲ ಒಣ ಮುಚ್ಚಿಗೆ ಎಂದು ಕರೆಯಲ್ಪಡುತ್ತವೆ.

೩. ಜೀವಂತ ಮುಚ್ಚಿಗೆ: ಜೀವಂತ ಮುಚ್ಚಿಗೆಯೆಂದರೆ ಮುಖ್ಯ ಬೆಳೆಯ ಮಧ್ಯೆ ಸಂಯೋಜಿಸಲ್ಪಟ್ಟ ವಿವಿಧ ಅಂತರ ಬೆಳೆಗಳು. ಉದಾಹರಣೆಗೆ ತೆಂಗಿನ ತೋಟದ ಮಧ್ಯೆ ಅಡಿಕೆ, ನುಗ್ಗೆ, ಜಾಯಿಕಾಯಿ, ಬಾಳೆ, ಪಪ್ಪಾಯಿ, ಮೆಣಸು, ಅಲಸಂಡೆ ಇತ್ಯಾದಿ ಅಂತರ ಬೆಳೆಗಳ ಹಸಿರು ಆಚ್ಛಾದನೆಯೇ ಜೀವಂತ ಮುಚ್ಚಿಗೆ. ಮುಚ್ಚಿಗೆಯಡಿಯ ಕತ್ತಲು ಸೂಕ್ಷ್ಮಾಣು ಜೀವಿಗಳಿಗೆ, ಎರೆಹುಳು, ಗೆದ್ದಲು ಇತ್ಯಾದಿ ಸೂಕ್ಷ್ಮ ಜೀವಿಗಳಿಗೆ ಯೋಗ್ಯವಾದ ವಾತಾವರಣವನ್ನು ನಿರ್ಮಿಸುತ್ತದೆ.

ಪಾಳೇಕರ್ ನಮ್ಮ ಮಣ್ಣಿನ ಎರೆಹುಳುಗಳ ವೈಶಿಷ್ಟ್ಯವನ್ನು ತುಂಬ ಸುಂದರವಾಗಿ ಮನವರಿಕೆ ಮಾಡಿಕೊಡುತ್ತಾರೆ. ನಮ್ಮ ಮುಚ್ಚಿಗೆಯಿಲ್ಲದ, ಆಳವಾದ ಉಳುಮೆಯುಳ್ಳ, ವಿಷಮಯವಾದ ಕೃಷಿ ಎರೆಹುಳಗಳನ್ನು ನಿಶ್ಚಲಗೊಳಿಸುತ್ತವೆ. ಅವು ಭೂಮಿಯ ೧೫ರಿಂದ ೨೦ ಅಡಿಗಳ ಕೆಳಗೆ ಸಮಾಧಿಸ್ಥವಾಗುತ್ತವೆ. ಹೀಗೆಯೇ ಅನೇಕ ವರ್ಷಗಳ ಕಾಲ ಅವುಗಳಿಗೆ ಬದುಕುವ ಸಾಮರ್ಥ್ಯ ಇರುತ್ತದೆ. ದೇಶೀ ದನಗಳ ಸೆಗಣಿಯ ಒಂದು ವಿಶೇಷವೆಂದರೆ ಅವುಗಳ ಎರೆಹುಳಗಳನ್ನು ಆಕರ್ಷಿಸುವ ಶಕ್ತಿ. ನಾವು ನೈಸರ್ಗಿಕ ಕೃಷಿಯನ್ನು ಆರಂಭಿಸಿದೊಡನೆಯೇ ಜೀವಾಮೃತದ ವಿಶಿಷ್ಟ ಗಂಧಕ್ಕೆ ಆಕರ್ಷಿತಗೊಂಡ ಎರೆಹುಳುಗಳು ಸಾವಿರ ಸಾವಿರವಾಗಿ ಭೂಮಿಯ ಮೇಲ್ಭಾಗಕ್ಕೆ ಬರುತ್ತದೆ. ಮುಚ್ಚಿಗೆಯಡಿಯ ಕತ್ತಲು, ತೇವಾಂಶ ಇವುಗಳಿಂದಾಗಿ ರೂಪುಗೊಂಡ ಹ್ಯೂಮಸ್ ಅನ್ನು ತಿನ್ನುತ್ತಾ, ಭೂಮಿಯ ಹದಿನೈದಿಪ್ಪತ್ತು ಅಡಿಗಳ ಆಳಕ್ಕೆ ಹೋಗುತ್ತಾ, ಮೇಲಕ್ಕೆ ಬರುತ್ತಾ ಸಾರಭರಿತವಾದ ಹಿಕ್ಕೆಯನ್ನು ಸತತವಾಗಿ ವಿಸರ್ಜಿಸುತ್ತ ತನ್ಮೂಲಕ ಭೂಮಿಯನ್ನು ನವೀಕರಿಸುವ ತಮ್ಮ ಅವಿಶ್ರಾಂತ ದುಡಿಮೆಯನ್ನು ಅವು ಪ್ರಾರಂಭ ಮಾಡುತ್ತವೆ. ತನ್ನಿಂದ ತಾನೇ ಶ್ರೇಷ್ಠವಾದ ಉಳುಮೆಯೊಂದು ನಡೆಯುತ್ತಿರುತ್ತದೆ.

ಒಂದು ಆದರ್ಶ ವಾತಾವರಣದಲ್ಲಿ ಒಂದು ಎಕರೆ ಭೂಮಿಯಲ್ಲಿ ಅವುಗಳ ಸಂಖ್ಯೆಯೆಷ್ಟು ಗೊತ್ತೆ? ಸುಮಾರು ಎರಡು ಲಕ್ಷಕ್ಕೂ ಹೆಚ್ಚು! ಇಷ್ಟು ಎರೆಹುಳುಗಳು ನಿರ್ಮಿಸುವ ಕೋಟ್ಯಂತರ ರಂಧ್ರಗಳು ಸಸ್ಯಗಳ ಬೇರುಗಳು ಹಬ್ಬಲು ವಿಶಾಲವಾದ ಅವಕಾಶವನ್ನು, ಮಳೆನೀರು ಭೂಗರ್ಭದೊಳಕ್ಕೆ ಇಳಿದು ಅಂತರ್ಜಲವಾಗಿ ರೂಪುಗೊಳ್ಳಲು ಬೇಕಾದ ಅಪೂರ್ವ ವ್ಯವಸ್ಥೆಯನ್ನು ನಿರ್ಮಿಸುತ್ತವೆ.

ಇಲ್ಲಿ ಪಾಳೇಕರ್ ನಮಗೆ ನಿಸರ್ಗದ ಇನ್ನೊಂದು ವಿಸ್ಮಯವನ್ನು ಅನಾವರಣಗೊಳಿಸುತ್ತಾರೆ. ಭೂಮಿಯ ಎರಡು ಶಕ್ತಿಗಳು –ಒಂದು ಗುರುತ್ವಾಕರ್ಷಣ ಶಕ್ತಿ, ಇನ್ನೊಂದು ಕೇಶಕರ್ಷಣ ಶಕ್ತಿ.

ಮುಂಗಾರು ಪ್ರಾರಂಭವಾದಾಗ ಬಿದ್ದ ಮಳೆ ನೀರು ಎರೆಹುಳಗಳ ಸುರಂಗಗಳ ಮುಖಾಂತರ ಭೂಮಿಯೊಳಕ್ಕೆ ಹೋಗಿ, ಹಿಡಿದಿಡಲಾಗದ ಮಳೆನೀರು ಹರಿದು ಹಳ್ಳಕೊಳ್ಳಗಳಲ್ಲಿ ಸರಿದು ನದಿಗೆ ಬೆರೆತು ಕೊನೆಗೆ ಸಮುದ್ರಕ್ಕೆ ಸೇರುತ್ತದೆ. ಇದು ಗುರುತ್ವಾಕರ್ಷಣೆಯ ಶಕ್ತಿಯಿಂದ ನಡೆಯುವ ಕ್ರಿಯೆ.

ಮುಂಗಾರು ಮುಗಿದು ಯಾವಾಗ ತೀಕ್ಷ್ಣವಾದ ಬಿಸಿಲು ಪ್ರಾರಂಭವಾಗುತ್ತದೆ, ಆಗ ಅಂತರ್ಜಲವಾಗಿ ಭುವಿಯೊಳಗೆ ಹೊಕ್ಕಿದ್ದ ನೀರು ಜಾಗೃತಗೊಳ್ಳುವ ಕೇಶಾಕರ್ಷಣ ಶಕ್ತಿಯಿಂದ ನಿಧಾನವಾಗಿ ಆಳದಿಂದ ಮೇಲ್ಭಾಗಕ್ಕೆ ಬರುತ್ತದೆ. ಮೇಲ್ಭಾಗದ ಮುಚ್ಚಿಗೆ (ಅದಕೆಂದೆ ಆ ಹೊತ್ತಿಗೆ ಕಾಡಿನಲ್ಲಿ ಮರಗಳು ಎಲೆಯುದುರಿಸಿ ಭೂಮಿಯನ್ನು ಸಂಪೂರ್ಣವಾಗಿ ಮುಚ್ಚುತ್ತವೆ.)

ಈ ತೇವಾಂಶವು ವಾತಾವರಣಕ್ಕೆ ಆವಿಯಾಗಿ ಹೋಗದಂತೆ ತಡೆದು ಗಿಡಮರಗಳ ಬೇರುಗಳಿಗೆ ಲಭ್ಯವಾಗಿಸುತ್ತದೆ. ಈ ನೀರಿನ ಜೊತೆಗೇ ಭೂಗರ್ಭದಿಂದ ಖನಿಜಸತ್ವಗಳೂ ಮೇಲೆ ಬಂದು ಶೇಖರಗೊಳ್ಳುತ್ತವೆ. ಹೀಗೆ ಇವೆರಡೂ ಶಕ್ತಿಗಳ ಕಾರಣದಿಂದಲೇ ಅತ್ಯಂತ ಕಡಿದಾದ ಬೆಟ್ಟಗಳಲ್ಲೂ ದಟ್ಟ ಕಾಡುಗಳ ಸೃಷ್ಟಿಯಾಗಿದೆ. ಹೀಗಾಗಿ ನೈಸರ್ಗಿಕ ಕೃಷಿಯಲ್ಲಿ ನೀರಿನ ಅಗತ್ಯ ತೀರ ಮಿತವಾಗಿರುತ್ತದೆ.

**ತೇವಾಂಶ ಅಥವಾ ಆರ್ದ್ರತೆ**

ಪಾಳೇಕರ್ ಹೇಳುವಂತೆ ಅತಿಯಾದ ನೀರಿನ ಬಳಕೆ ಮಣ್ಣಿನ ಕಣಗಳ ನಡುವಿನ ಖಾಲಿ ಜಾಗವನ್ನು ಆಕ್ರಮಿಸಿ ಅಲ್ಲಿಂದ ಆಮ್ಲಜನಕವನ್ನು ಹೊರದೂಡುತ್ತದೆ ಮತ್ತು ಮಣ್ಣಿನಲ್ಲಿ ಗಾಳಿಯಾಡುವಿಕೆ ನೀರಿಗಿಂತ ಹೆಚ್ಚು ಅಗತ್ಯವಾದದ್ದು. ಕೇಶಾಕರ್ಷಣ ಶಕ್ತಿಯಿಂದ ಭೂಮಿ ಹೊಂದುವ ತೇವಾಂಶ ಮತ್ತು ಅದೇ ಮುಚ್ಚಿಗೆ ಬೆಳಗ್ಗಿನ ಮಂಜಿನ ನೀರನ್ನು ಹೀರಿ ಉಂಟುಮಾಡುವ ತಂಪು ನೈಸರ್ಗಿಕ ಕೃಷಿಯನ್ನು ಒಣಭೂಮಿಯ ಕೃಷಿ ವೈವಿಧ್ಯಕ್ಕೂ ಅತ್ಯಂತ ಸೂಕ್ತವಾದುದನ್ನಾಗಿ ಮಾಡುತ್ತದೆ.

ಬೇಸಿಗೆಯಲ್ಲಿ ನೀರು ಕೊಡದ –ಕೊಡಲಾಗದ ಬೆಳೆಗಳಿಗೂ ಜೀವಾಮೃತವನ್ನು ಬೆಳಿಗ್ಗೆ ಅಥವಾ ಸಂಜೆ ನೀಡಬಹುದು.

**ಬೆಳೆಗಳ ಸಂಯೋಜನೆ**

ಸೂರ್ಯನ ಬಿಸಿಲಿನ ಪ್ರಖರತೆಯನ್ನು ಫೂಟ್ ಕ್ಯಾಂಡಲ್ ಗಳಲ್ಲಿ ಅಳೆಯುತ್ತಾರೆ. ಒಂದು ಮೇಣದ ಬತ್ತಿಯನ್ನು ಹಚ್ಚಿದರೆ ಆ ಮೇಣದ ಬತ್ತಿಯ ಒಂದು ಅಡಿ ವ್ಯಾಸದ ಸುತ್ತಲಿನ ಬೆಳಕಿನ ಉಷ್ಣತೆಗೆ ಒಂದು ಫೂಟ್ ಕ್ಯಾಂಡಲ್ ಪ್ರಖರತೆ ಎನ್ನುತ್ತಾರೆ. ನಮ್ಮಲ್ಲಿ ಬೇಸಗೆಯ ಸೂರ್ಯನ ಪ್ರಖರತೆ ೧೦,೦೦೦ ಫೂಟ್‌ಕ್ಯಾಂಡಲ್ ನಿಂದ ೧೨,೦೦೦ ಫೂಟ್ ಕ್ಯಾಂಡಲ್‌ನ ವರೆಗಿರುತ್ತದೆ. ೧೦,೦೦೦ ಫೂಟ್ ಕ್ಯಾಂಡಲ್ ಪ್ರಖರತೆ ಅಂದರೆ ೧೦,೦೦೦ ಕ್ಯಾಂಡಲ್ ಗಳನ್ನು ವೃತ್ತಾಕಾರವಾಗಿ ಹಚ್ಚಿದರೆ ಅದರ ಸುತ್ತಲಿನ ಒಂದು ಅಡಿ ಆವರಣದ ಬೆಳಕಿನ ಉಷ್ಣತೆಗೆ ೧೦,೦೦೦ ಫೂಟ್ ಕ್ಯಾಂಡಲ್ ಪ್ರಖರತೆ ಎಂದು ತಿಳಿಯಬಹುದು.

ಭತ್ತ, ಕಬ್ಬು, ಹೈಬ್ರಿಡ್ ಹುಲ್ಲು ಇತ್ಯಾದಿ ಹುಲ್ಲಿನ ಜಾತಿಯ ಸಸ್ಯಗಳು ಸೂರ್ಯನ ಪೂರ್ಣ ಪ್ರಖರತೆಯನ್ನು ತಾಳಿಕೊಳ್ಳಬಲ್ಲವು. ಇನ್ನು ಕೆಲವು ಸಸ್ಯಗಳಿಗೆ ಈ ಮಟ್ಟದ ತೀವ್ರತೆ ಸಹನವಾಗಲಾರದು. ಉದಾಹರಣೆಗೆ ತೆಂಗಿನ ಬೆಳಕಿನ ಸಹನಾಶಕ್ತಿ ೫೪೦೦ ಫೂಟ್ ಕ್ಯಾಂಡಲ್ ನಿಂದ ೬೦೦೦ ಫೂಟ್ ಕ್ಯಾಂಡಲ್. ಅಡಿಕೆಗೆ ೨೮೦೦ ಫೂಟ್ ಕ್ಯಾಂಡಲ್ ಬೆಳಕಿದ್ದರೂ ಸಾಕು. ಬಾಳೆ ೩.೬೦೦ ಫೂಟ್ ಕ್ಯಾಂಡಲ್ ನಿಂದ ೪೫೦೦ ಫೂಟ್ ಕ್ಯಾಂಡಲ್ ಬೆಳಕಿಗೆ ಚೆನ್ನಾಗಿ ಬೆಳೆಯುತ್ತದೆ. ಹಸಿಮೆಣಸಿನ ಗಿಡ ೧೮೦೦ ಫೂಟ್ ಕ್ಯಾಂಡಲ್ ಬಿಸಿಲಿಗೂ ಚೆನ್ನಾಗಿ ಬರುತ್ತದೆ. ಅದೇ ವೆನಿಲ್ಲಾ ಬಳ್ಳಿ ೮೦೦ ಫೂಟ್ ಕ್ಯಾಂಡಲ್ ತೀವ್ರತೆಯನ್ನಷ್ಟೇ ಭರಿಸಬಲ್ಲುದು. ಹೀಗಾಗಿ ನೈಸರ್ಗಿಕ ಕೃಷಿಯನ್ನು ಕೈಗೊಳ್ಳುವಾಗ ನಾವು ಈ ಬೆಳಕಿನ ಲಭ್ಯತೆಯನ್ನು ಮತ್ತು ಆಯಾ ಬೆಳೆಗಳ ಬಿಸಿಲಿನ ಪ್ರಖರತೆಯ ಸಹನಾಮಿತಿಯನ್ನು ಗಮನದಲ್ಲಿರಿಸಿಕೊಂಡು ನಮ್ಮ ತೋಟದ ಬೆಳೆಗಳ ಸಂಯೋಜನೆಯನ್ನು ಮಾಡಬೇಕಾಗುತ್ತದೆ.

ಪ್ರತಿ ಚದರ ಅಡಿ ಹಸಿರು ಎಲೆಯ ಮೇಲೆ ೧೨೫೦ ಕಿಲೋ ಕ್ಯಾಲರಿ ಸೂರ್ಯನ ಬೆಳಕು ಬೀಳುತ್ತದೆ. ಈ ಸೌರಶಕ್ತಿಯಲ್ಲಿ ಕೇವಲ ಶೇಕಡಾ ಒಂದರಷ್ಟನ್ನು ಮಾತ್ರ ಅಂದರೆ ೧೨.೫ ಕಿಲೋ ಕ್ಯಾಲರಿ ಸೌರಶಕ್ತಿಯನ್ನು ಮಾತ್ರ ಹಸಿರು ಎಲೆಗಳು ಬಳಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿವೆ. ಇದು ನಿಸರ್ಗದ ನಿಯಮ. ಪ್ರಕೃತಿಯ ಪೂರ್ಣತೆಯನ್ನೊಮ್ಮೆ ನೋಡಿ. ಯಾವುದೇ ಸಸ್ಯ ತನ್ನ ಆಹಾರದ ಶೇಕಡಾ ೯೮.೫ರಷ್ಟನ್ನು ಸೌರಶಕ್ತಿಯಿಂದ, ವಾತಾವರಣದಿಂದಲೇ ಪಡೆಯುತ್ತದೆ. ಶೇಕಡಾ ೧.೫ರಷ್ಟನ್ನು ಮಾತ್ರ ಅದು ಭೂಮಿಯಿಂದ ಪಡೆಯುತ್ತದೆ! ಸಸ್ಯ ಅದೆಷ್ಟು ಸ್ವಾವಲಂಬಿ! ನಮ್ಮೆಲ್ಲ ಕೃಷಿ ಪದ್ಧತಿಗಳು ಕೇವಲ ಈ ೧.೫% ನ್ನು ಕೊಡುವುದಕ್ಕೆಂದೇ ಸೃಷ್ಟಿಸಲ್ಪಟ್ಟಿವೆ ಎಂದಾಗ ಕೃಷಿ ವಿಜ್ಞಾನಿಗಳ ಎನ್.ಪಿ.ಕೆ.ಗಳು ಇನ್ನಿಷ್ಟೋ ಲಘು ಪೋಷಕಾಂಶಗಳು, ದ್ರವರೂಪೀ ಗೊಬ್ಬರಗಳು ಅರ್ಥಹೀನ ಎನಿಸುತ್ತವೆ. ಟನ್ನುಗಟ್ಟಲೆ ಕೊಟ್ಟಿಗೆ ಗೊಬ್ಬರ ಕೂಡ ಅನಗತ್ಯ. ಗುಜರಾತಿನ ಹೆಸರಾಂತ ಸೇಂದ್ರೀಯ ಪದ್ಧತಿಯ ಕೃಷಿಕ ಭಾಸ್ಕರ ಸಾವೆ ಸುಂದರವಾಗಿ ಹೇಳುವಂತೆ ಸಸ್ಯ ಒಂದು ಅತ್ಯಂತ ಮಿತಾಹಾರಿ ಜೀವಿ.

ನಮ್ಮಲ್ಲಿ ಕೊಟ್ಟಿಗೆ ಗೊಬ್ಬರ ಇದ್ದಲ್ಲಿ ಎಕರೆಗೆ ನೂರು ಕೇಜಿ ಹಟ್ಟಿ ಗೊಬ್ಬರವನ್ನು ಜೀವಾಮೃತ ಚಿಮುಕಿಸಿ ಉಪಯೋಗಿಸಿ ಎಂದು ಪಾಳೇಕರ್ ಹೇಳುತ್ತಾರೆ. ಸಾಕಷ್ಟು ಕೊಟ್ಟಿಗೆ ಗೊಬ್ಬರ ಇದೆ ಎಂದಾದರೆ ಗರಿಷ್ಠ ಒಂದು ಎಕರೆಗೆ ಐದು ಟನ್– ಜೀವಾಮೃತ ಬೆರೆಸಿ ಉಪಯೋಗಿಸಬಹುದು.

(ಕೃಪೆ: ಧರ್ಮಭಾರತೀ)

## ಸಹಸ್ಪಂದನ

ಗೋ ವಿಶ್ವ ಹಲವು ಗೋವಿನ ಸಂಬಂಧಿ ವಿಚಾರಗಳನ್ನು ಹೊಂದಿದ್ದು ವಿಚಾರಪೂರ್ಣವಾಗಿದೆ. ಇ–ಪತ್ರಿಕೆ ಓದುವಾಗ ವಿಶೇಷ ಸಂತೋಷ ಮತ್ತು ಸಂತೃಪ್ತಿ ಉಂಟಾಗುತ್ತದೆ. ನಿಮ್ಮ ಈ ಪ್ರಯತ್ನಕ್ಕೆ ಸರ್ವ ಜಯ ಸಿಗಲಿ.

–ತೇಜಸ್ವಿನಿ ಕೆ.ಎನ್.

ಇ–ಪತ್ರಿಕೆ ಗೋ ವಿಶ್ವ ಚೆನ್ನಾಗಿದೆ. ಸಪ್ಟಂಬರ್ ಸಂಚಿಕೆಯ ಜೊತೆ ಹಳೆಯ ಸಂಚಿಕೆಗಳನ್ನು ಕೂಡ ಓದಿದೆ. ನಮ್ಮ ಗೋವಿನ ಬಗ್ಗೆ ಸರ್ವವನ್ನು ತಿಳಿಯುವ ಅವಕಾಶ ಇದರಿಂದಾಯಿತು. ಉತ್ತಮ ಪ್ರಯತ್ನಕ್ಕೆ ಶುಭಹಾರೈಕೆಗಳು. ಪುರಾತನ ಗೋ ತಳಿಗಳು ಈ ಮೂಲಕವಾದರು ಉಳಿಯಲಿ.

– ರವಿಶಂಕರ ಸಿ. ಶಾಸ್ತ್ರಿ